


ಕೂಡ ಇದನ್ನೇ – ಸ್ವಹಿತದ ಚೌಕಟ್ಟಿನಲ್ಲಿ ಸಿಕ್ಕಿಕೊಂಡಿರುವ ನಮಗೆ ನಮ್ಮ ಕುಟುಂಬದ ಸದಸ್ಯರನ್ನೇ ಕೊಂಚ ಉದಾರವಾಗಿ ನೋಡಲು ಸಾಧ್ಯವಾಗುತ್ತಿಲ್ಲ ಎನ್ನುವ ವಿಷಾದ ಇಲ್ಲಿಯದು. ಆಧುನಿಕ ಸಂದರ್ಭದಲ್ಲಿ ದೈವ ಹಾಗೂ 'ಕೇವಲ ಮನುಷ್ಯ' – ಎರಡು ಪಾತ್ರಗಳನ್ನೂ ನಾವೇ ನಿರ್ವಹಿಸಬೇಕಾಗಿದೆ. ಇಂಥ ಸಂಕೀರ್ಣ ಸಂದರ್ಭದಲ್ಲಿ 'ಅಸ್ತು' ಎನ್ನುವ ಮಾತಿಗೆ ಮನಸ್ಸನ್ನು ತಾಕುವ ಶಕ್ತಿ ಇರುವಂತಿದೆ. ಅಂತಃಕರಣ, ಸಾವಧಾನ ಹಾಗೂ ಕ್ಷಮಾಗುಣದ ಲೇಪವೂ ಈ ಪದಕ್ಕೆ ಇರುವಂತಿದೆ.

'ಅಸ್ತು' ಕಥನವನ್ನು ಮರೆಗುಳಿ ತಂದೆ ಹಾಗೂ ಕುಟುಂಬದ ಪ್ರಸಂಗ ಎಂದಷ್ಟೇ ಭಾವಿಸಲು ಸಾಧ್ಯವಿಲ್ಲ. ನಮ್ಮ ಬದುಕಿನ ನಿಜವಾದ ಆದ್ಯತೆಗಳು ಯಾವುವು ಎನ್ನುವುದರ ಶೋಧದ ರೂಪದಲ್ಲಿಯೂ ಒದಗಿಬರುವ ಚಿತ್ರವಿದು. ಲೌಕಿಕದ ನಮ್ಮ ಬದುಕು ಮನೆ, ಮಕ್ಕಳು, ಬಂಧುಮಿತ್ರರು – ಹೀಗೆ ಕೌಟುಂಬಿಕ ಚೌಕಟ್ಟಿಗೆ ಸಂಬಂಧಿಸಿರುತ್ತದೆ. ಇದರಾಚೆಗಿನ ಮಾನಸಿಕ ಜಗತ್ತಿಗೆ ಸಂಬಂಧಿಸಿದ ಆದ್ಯತೆಗಳ ಕುರಿತು ನಾವು ಯೋಚಿಸುವುದು ಕಡಿಮೆ. ಅಂಥ ಸಾಧ್ಯತೆಗಳ ಕುರಿತು 'ಅಸ್ತು' ನಮ್ಮ ಗಮನಸೆಳೆಯುತ್ತದೆ.

ಚಕ್ರಪಾಣಿಗಳ ಮರೆವೆಯ ಬಗೆಗಿನ ಇರಾ ಕುಟುಂಬದ ಆತಂಕ ಸಿನಿಮಾ ನೋಡುವ ಪ್ರೇಕ್ಷಕರದೂ ಆಗುತ್ತದೆ. ಸೂಕ್ಷ್ಮದಲ್ಲಿ ನೋಡುವುದಾದರೆ, ಇಲ್ಲಿ ನಾವು ಭಾವಿಸುವ ಮರೆವು ನಿಜ ಅರ್ಥದಲ್ಲಿ ಮರೆವೆಯೇ ಅಲ್ಲ. ಮಗುವಿಗೆ ನೆನಪುಗಳ ಹಂಗಾದರೂ ಎಲ್ಲಿಯದು? ಹಿರಿಯರು ಕೂಡ ಮಕ್ಕಳು ಎನ್ನುವುದನ್ನು ಒಪ್ಪುವುದು ಸಾಧ್ಯವಾದರೆ, ಅವರು ನೆನಪುಗಳ ಭಾರ ಕಳೆದುಕೊಳ್ಳುವುದು (ಯಾವ ಕಾರಣದಿಂದಲೇ ಇರಲಿ) ನಮಗೆ ಸಮಸ್ಯೆಯಾಗಬಾರದು. ಇಲ್ಲಿ ಸಮಸ್ಯೆ ಇರುವುದು ಅವರನ್ನು ಮಕ್ಕಳೆಂದು ಒಪ್ಪಿಕೊಳ್ಳಲು ಸಿದ್ಧರಿಲ್ಲದ ನಮ್ಮ ಮನಸ್ಥಿತಿಯಲ್ಲಿ. ಮಕ್ಕಳಿಗೆ ಅಮ್ಮನಾಗುವುದೋ ಅಪ್ಪನಾಗುವುದೋ ನಮಗೆ ಅನಿವಾರ್ಯ. ಆದರೆ, ಹಿರಿಯರ ಪಾಲಿಗೆ ಅಪ್ಪ–ಅಮ್ಮನಾಗುವುದು ಕಷ್ಟವಾಗುತ್ತಿದೆ.